

## ಸಸ್ಯಾಹಾರವೆಂಬ ಅಪ್ಪಟ ಆಹಾರ

ಈ ವಿಲ್ಲಾದಲ್ಲಿ, ಬೆಳಿಗ್ಗೆ ತಿಂಡಿ ಮಾಡಲು ಹುಡುಗಿಯೊಬ್ಬಳು ಬರುತ್ತಿದ್ದಳು. ತಾನು ಹಿಂದೂ ಎಂದು ಹೇಳಿಕೊಂಡ ಆಕೆಯ ಹೆಸರು ಶ್ರೀಕೃಷ್ಣ! ಕೃಷ್ಣನ ಹೆಸರನ್ನು ಸ್ತ್ರೀಯರಿಟ್ಟುಕೊಳ್ಳುವುದಿದೆಯಾದರೂ, ಸ್ತ್ರೀ ಹೆಸರೇ ಎನ್ನುವ ಜಿಜ್ಞಾಸೆ. ಅವಳಿಗೆ ಸಹಾಯಕನಾಗಿದ್ದವನ ಹೆಸರು 'ಮಾದೆ'! ಅವಳು ಶ್ರೀಕೃಷ್ಣಳಾದರೆ ಇವನು ಮಾದ್ರಿಯಿರಬಹುದೇ? ಬಾಲಿಯಲ್ಲಿ ಪೌರಾಣಿಕ ಪುರುಷರ ಹೆಸರನ್ನು ಸ್ತ್ರೀಯರೂ, ಸ್ತ್ರೀ ಹೆಸರನ್ನು ಪುರುಷರೂ ಇಟ್ಟುಕೊಳ್ಳುವುದು ಗಮನಿಸಿದ್ದರಿಂದ ಹಾಗೇ ಕೇಳಿದೆ. ಇಬ್ಬರೂ ಜೋರಾಗಿ ನಕ್ಕು, 'ಮಾದ್ರಿ ಪಾಂಡು ಹೆಂಡತಿ! ಇವನು ಹುಡುಗ!' ಎಂದು ನನ್ನ ಸಾಮಾನ್ಯ ಜ್ಞಾನವನ್ನು ವಿಸ್ತರಿಸಿದಳು, ಮುಕುಂದ ಮುರಾರಿ, 'ಶ್ರೀಕೃಷ್ಣ'ಯೆಂಬ ನಾಮಾಂಕಿತೆ!

ಬಾಲಿಯಲ್ಲಿ ನಮ್ಮಂತೆ ಅಕ್ಕಿ ಬಳಸಿದರೂ ಅವರು ಮಾಂಸಾಹಾರಿಗಳು. ಗೋಮಾಂಸ ಮಾತ್ರ ನಿಷಿದ್ಧ. ಗೋ ಎಂದರೆ ದೇವರು, ತಾಯಿಯೆಂಬ ಕಲ್ಪನೆ. ಕೆಲ ಹಿಂದೂಗಳು ಸ್ವಚ್ಛತೆಯ ಕಾರಣಕ್ಕೆ ಹಂದಿಯನ್ನು ತಿನ್ನುವುದಿಲ್ಲವಂತೆ. ಆದ್ದರಿಂದ ಶುದ್ಧ ಸಸ್ಯಾಹಾರ ಸಿಗುವುದು ಕಷ್ಟ. ಮೊಟ್ಟೆಯೂ ತಿನ್ನುವುದಿಲ್ಲವೆಂದರೆ ಆಶ್ಚರ್ಯದಿಂದ ನೋಡುತ್ತಾರೆ. ನಮ್ಮ ಶುದ್ಧ ಸಸ್ಯಾಹಾರಿ ಆಹಾರ ಅವರ ಕಲ್ಪನೆಗೆ ಮೀರಿದ್ದು. ಶ್ರೀಕೃಷ್ಣ, ನೂಡಲ್ಸ್ ಬೇಯಿಸಿ ಟೊಮ್ಯಾಟೊ ಹುರಿದು ಸಪ್ಪೆ ಆಹಾರ ಕೊಡುತ್ತಿದ್ದಳು. ಖಾರ ಬೇಕೆಂದಾಗ ಕಂದು ಸಾಸ್ ತಂದಿಟ್ಟಳು. ನಮ್ಮನೆಯವರು ಖಾರವಾಗಿದೆಯೆಂದು ಚಪ್ಪರಿಸಿಕೊಂಡು ತಿಂದರು. ಸಾಸ್ ಮೀನೆಣ್ಣೆ ವಾಸನೆ ಹೊಡೆಯುತ್ತಿದ್ದುದರಿಂದ, 'ವೆಜಿಟೇರಿಯನ್ನಾ?' ಎಂದು ಮತ್ತೆ ಕೇಳಿದೆ. ಹೌದೆಂದು ತಲೆಯಾಡಿಸಿದಳು ಶ್ರೀಕೃಷ್ಣೆ! 'ಯಾವುದರಿಂದ ಮಾಡಿದ್ದು?' ಕೇಳಿದರೆ, **'Its Shrimp!'** ಅಂದಳು ಅತ್ಯಂತ ನಿರ್ವಿಕಾರವಾಗಿ.

## ಅರಿಯೆಂಬ ಹೆಸರಿನ ಮಹಾತ್ಮೆ

ಉಬುಡ್‌ನ ನಮ್ಮ ಕಾರಿನ ಚಾಲಕನ ಹೆಸರು 'ಅರಿ'. 'ನಾನೂ ಹಿಂದೂ!' ಎಂದು ಫಳಕ್ಕನೆ ಮಿಂಚಿನಂತೆ ನಕ್ಕ.

'ಅರಿ' ಹೆಸರು ಕೇಳಿ ಆಶ್ಚರ್ಯವಾಗಿ ತಪ್ಪಾಗಿ ಕೇಳಿಸಿಕೊಂಡಿರಬಹುದೆಂದು ಕಸಿವಿಸಿ. 'ಹರಿ' ಇರಬಹುದೆಂದುಕೊಂಡು ಸಂಬೋಧಿಸಿದರೆ, ಹರಿಯಲ್ಲ, ಅರಿಯೆಂದು ತಿದ್ದಿದ. ಬಾಲಿನೀಸ್ ಸಾಂಪ್ರದಾಯಿಕ ಧಿರಿಸು 'ಸರೋಂಗ್', ಬಾಟಿಕ್ ಡಿಸೈನ್‌ನ ನೀಲಿಯಂಗಿ, ತಲೆಗೆ 'ಉಡೆಂಗ್' ಕಟ್ಟಿಕೊಂಡಿದ್ದ, ಎಡಗಿವಿಯಲ್ಲಿ ತಿಳಿಹಳದಿ ಬಣ್ಣದ ಕಣಿಗಿಲೆ ಮುಡಿದವನು 'ಅರಿ' ಎಂಬ ವೈರಿ ಹೇಗಾದನೋ?

ಅರಿಯೆಂದರೆ ಶತ್ರುವೆಂದು ವಿವರಿಸಿದರೆ, 'ನಮ್ಮಲ್ಲಿ ಶತ್ರುಗಳು ದೇವರನ್ನು ಕಾಪಾಡುವವರು! ಅವರನ್ನು ನಾವು ಕೆಟ್ಟ ದೃಷ್ಟಿಯಲ್ಲಿ ನೋಡುವುದಿಲ್ಲ!' ಅರಿ ನಗುತ್ತಾ ಶಾಕ್ ಕೊಟ್ಟ. ಆಮೇಲೆ ಮತ್ತೊಂದು ವಿವರಣೆ: 'ಬಾಲಿಯ ದೇವಸ್ಥಾನದ ಹೊರಾಂಗಣದಲ್ಲಿ ಅನೇಕ ರಾಕ್ಷಸರ ಪ್ರತಿಮೆಗಳಿವೆ. ಅವೆಲ್ಲವೂ ಗರ್ಭಗುಡಿಯೊಳಗಿನ ದೇವರನ್ನು ದುಷ್ಟ ಶಕ್ತಿಗಳಿಂದ ಕಾಪಾಡುತ್ತವೆ!' ನಮ್ಮನ್ನು ರಕ್ಷಿಸುವ ರಕ್ಷಕನಿಗೇ ರಕ್ಷಣೆಯೇ?

## ದೇವರನಾಡಿನಲ್ಲಿ ಅಂಗರಕ್ಷಕರು

ಪ್ರಶಾಂತ ಹಿಂದೂ ಮಹಾ ಸಾಗರದ ತಟದಲ್ಲಿ, ಹಸಿರಿನಿಂದ ಕಂಗೊಳಿಸುವ ಮನಮೋಹಕ ಪ್ರಕೃತಿಯ ಮಡಿಲಲ್ಲಿ ಪುಟ್ಟ ಗುಬ್ಬಚ್ಚಿಗೂಡಿನಂತೆ ಪವಡಿಸಿರುವ ನಿರುದ್ವಿಗ್ನ ದ್ವೀಪ ಬಾಲಿಯನ್ನು ಕಂಡಾಗ ಅವನ ಮಾತು ಅಕ್ಷರಶಃ ನಿಜವೆಂದೆನ್ನಿಸದೇ ಇರದು. ರಸ್ತೆಯ ಉದ್ದಾನುದ್ದಕ್ಕೂ ಇಕ್ಕೆಲಗಳಲ್ಲೂ ವೈವಿಧ್ಯಮಯ ಬಣ್ಣಗಳಲ್ಲಿ ಕಂಗೊಳಿಸುತ್ತಿರುವ ದೇವ ಕಣಿಗಿಲೆಗಳು, ಕಡುಹಳದಿ, ತಿಳಿಹಳದಿ, ಅಚ್ಚಬಿಳಿ, ಗಾಢಕೆಂಪು, ನವಿರುಗುಲಾಬಿ, ದಟ್ಟಕೇಸರಿ ವರ್ಣಗಳ ಗೊಂಚಲು ಹೂಗಳಂತೂ ದೇವಸ್ಥಾನ, ವಿಲ್ಲಾಗಳೆದುರು ಹ್ಯನ್ನನಕ್ಕೆ ತಂಪೆರೆಚುತ್ತಾ ಸೊಂಪಾಗಿ ತೂಗಾಡುತ್ತಿವೆ.

ಹಳೆ ವಿನ್ಯಾಸವುಳ್ಳ ಕೆಂಪು ಕಟ್ಟಡಗಳ ನಡುವೆಯೇ ಹೆಜ್ಜೆ ಹೆಜ್ಜೆಗೂ ಪ್ರಾಚೀನ ವಾಸ್ತುಶಿಲ್ಪಗಳ ಬೃಹತ್ ದೇವಸ್ಥಾನಗಳ ಸಮುಚ್ಚಯಗಳು 'ಐಲ್ಯಾಂಡ್ ಆಫ್ ಗಾಡ್' ಅನ್ವರ್ಥ ನಾಮಕ್ಕೆ ಸರಿದೂಗಿಸುವಂತಿದೆ. ದೇವರಿಂದ ಕಿಕ್ಕಿರಿದ ಈ ಸುಂದರ ನಾಡನ್ನು ರಕ್ಷಿಸಲು ಅಂಗರಕ್ಷಕರು ಅವಶ್ಯವೇನೋ?

ಬಾಲಿಯ ಯಾವ ದೇವಸ್ಥಾನ ಪ್ರವೇಶಿಸಿದರೂ, ಪ್ರಾಂಗಣದ ಸುತ್ತಮುತ್ತಲೆಲ್ಲಾ ಹಲವು ಆಕಾರಗಳಲ್ಲಿ ಮೈವೆತ್ತಿರುವ ರಾಕ್ಷಸರ ದಂಡೇ ಇರುತ್ತವೆ. ಕುಬ್ಜ ಆಕಾರದಲ್ಲಿರುವ ಪ್ರತಿಮೆಗಳೇನೂ ಭಯಾನಕವಾಗಿಲ್ಲ, ದೇವಸ್ಥಾನದ ನಾಲ್ಕೂ ದಿಕ್ಕಿನಲ್ಲಿ ದ್ವಾರಪಾಲಕರಂತೆ ನಿಂತಿರುವ ಕಲ್ಲಿನ ಶಿಲ್ಪಗಳವು! ಇದಕ್ಕೆ ಪೂರಕವಾಗಿಯೆಂಬಂತೆ, ಬಾಲಿಯ ದಕ್ಷಿಣ ದಿಕ್ಕಿನಲ್ಲಿ, 230 ಅಡಿ ಎತ್ತರದ ಬಂಡೆಯಲ್ಲಿ ತಲೆಯೆತ್ತಿ ನಿಂತಿರುವ ರುದ್ರ ರಮಣೀಯ ಪುರ ಉಹುರ್ ಉಲುವಾಟು ದೇವಸ್ಥಾನದ ತುತ್ತ ತುದಿಯಲ್ಲಿ ಸಮುದ್ರಕ್ಕಭಿಮುಖನಾಗಿ ಕುಂಭಕರ್ಣನ ಬೃಹತ್ ಮೂರ್ತಿಯಿದೆ!

## ಲೆಂಪ್ಯುಯಾಂಗ್ ಎಂಬ ಸ್ವರ್ಗದ ಹೆಬ್ಬಾಗಿಲು

ಬಾಲಿ ನೈಸರ್ಗಿಕ ಸೌಂದರ್ಯಕ್ಕೆ ಹೆಸರುವಾಸಿ. ಸುತ್ತಲೂ ಅಗಾಧವಾದ ಹಿಂದೂ ಮಹಾಸಾಗರದ ತಿಳಿ ನೀಲ ಅಲೆಗಳ ಸುಂದರ ತೀರಗಳು, ನಡು ಬಂಡೆಗಳು, ಎತ್ತರದ ಬೆಟ್ಟದಲ್ಲಿ ಬೃಹದಾಕಾರದ